Indian Journal of History and Archaeology

ISSN (E):2582-225X
Vol-1 Issue 4, NOV-DEC, 2019, 61-73

# ಕನಕದಾಸರು ಮತ್ತು ಶರೀಫರ ಸಾಹಿತ್ಯದಲ್ಲಿ ಸೌಹಾರ್ದತೆಯ ನೆಲೆಗಳು

**ಲಕ್ಷ್ಮಿಕಾಂತ ಮಿರಜಕರ**

**ಲಕ್ಷ್ಮಿಕಾಂತ ಮಿರಜಕರ**
ಸಂಶೋಧನ ವಿದ್ಯಾರ್ಥಿ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ,
ಶಿಗ್ಗಾಂವ ತಾಲ್ಲೂಕು, ಹಾವೇರಿ ಜಿಲ್ಲೆ.

ಸಾವಿರಾರು ಜಾತಿಗಳನ್ನಾಗಿ ನಮ್ಮ ನಮ್ಮಲ್ಲೆ ಮಾಡಿಕೊಂಡು ಏಕತೆಯಿಂದ ಬದುಕುತ್ತಿರುವ ನೆಲ ನಮ್ಮದು. ಮೂಲತಃ ಕೋಮು ಸೌಹರ್ದತೆಯ ಶಾಂತಿ ನೆಲ. ಜಾತಿಜಾತಿಗಳ ನಡುವೆ ಪರಸ್ಪರ ಪ್ರೀತಿಯನು, ಸಹಕಾರವನ್ನು, ಸುಖ–ದುಖಃವನ್ನು, ಸಹೃದಯತೆಯಿಂದ ಹಂಚಿಕೊಂಡು ಬಾಳುವ ಸಮರಸದ ಮನೋಭಾವವನ್ನು ಕೋಮುಸೌಹಾರ್ದತೆ ಎಂದು ಕರೆಯುವರು.

ಅನೇಕ ಧರ್ಮಗಳನ್ನು ತನ್ನ ಒಡಲಲ್ಲಿ ನೆಲೆಸಲು ಅವಕಾಶ ಕೊಟ್ಟಿರುವ ದೇಶ. ಇಂಥ ದೇಶದಲ್ಲಿನ ಧರ್ಮಗಳು ಪರಸ್ಪರ ಗೌರವದಿಂದ ಸಹೋದರತ್ವ ಭಾವನೆಯಿಂದ ಬಾಳುವ ಮನೋಭಾವವನ್ನು ಕೋಮುಸೌಹಾರ್ದತೆ ಎನ್ನಬಹುದು. ಇಂತಹ ಸೌಹಾರ್ದತೆಯ ನೆಲದಲ್ಲಿ ಹುಟ್ಟಿರುವ ಸಂತ ಕನಕದಾಸರು ಮತ್ತು ಸಂತ ಶಿಶುನಾಳ ಶರೀಫರು ತಮ್ಮ ಸಾಹಿತ್ಯದಲ್ಲಿ ಯಾವ ರೀತಿ ಸೌಹಾರ್ದತೆಯ ಮಹತ್ವವನ್ನು ಸಾರಿದ್ದಾರೆ ಎಂದು ಈ ಕೆಳಗಿನಂತೆ ಗುರುತಿಸಲಾಗಿದೆ.

**ಕನಕದಾಸರ ಸಾಹಿತ್ಯದಲ್ಲಿ ಜಾತಿ ಮತ್ತು ಧರ್ಮತೀತ ನೆಲೆಗಳು**

ಹದಿನಾರನೇಯ ಶತಮಾನದಲ್ಲಿ ಜನಸಿದ್ದ ಕನಕದಾಸರು ರಚಿಸಿದ ಕೃತಿಗಳು ಮತ್ತು ಕೀರ್ತನೆ, ಮುಂಡಿಗೆಗಳು ಮಧ್ಯಕಾಲಿನ ಇತಿಹಾಸದಲ್ಲಿ ಕಂಡುಬರುವ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಂಘರ್ಷಗಳ ಅಧ್ಯಯನ ಮಾಡಲು ಯೋಗ್ಯವಾದ ಕೃತಿಗಳು. ಅದರಲ್ಲೂ ಆ ಕಾಲದ ಜಾತಿ ಮತ್ತು ಧರ್ಮಗಳ ನಡುವೆ ಇದ್ದ ಕಂದಕವನ್ನು ಅಸಮಾನತೆಯ ಗೋಡೆಗಳನ್ನು ಕಿತ್ತೊಗೆಯಲು ಕನಕದಾಸರು ತಮ್ಮ ಸಾಹಿತ್ಯದ ಮೂಲಕ ಪಟ್ಟ ಕಷ್ಟ ನೋವು ಅವಮಾನಗಳು ಒಂದೆರಡಲ್ಲ. ಯಾವಾಗ ಮಾನವರು ತಮ್ಮ ತಮ್ಮಲ್ಲಿ ಸಮುದಾಯಗಳು ಜಾತಿ, ಧರ್ಮ,

ವರ್ಗದ ಆಧಾರದ ಮೇಲೆ ವಿಂಗಡಿಸಿಕೊಂಡು ಬದುಕಲು ಪ್ರಾರಂಭಿಸಿದರೋ ಆವಾಗಿನಿಂದ ದಬ್ಬಾಳಿಕೆಗಳು, ಕ್ರೌರ್ಯಗಳು, ಮೇಲು ಕೀಳೆಂಬ ತಾರತಮ್ಯದ ಕೀಳು ಭಾವನೆಗಳು, ಸಂಘರ್ಷಗಳ ಕ್ರೌರ್ಯಗಳ ಚರಿತೆಯು ಪ್ರಾರಂಭವಾಯಿತು. ಜಾತಿ ಧರ್ಮಗಳ ಆಧಾರದ ಮೇಲೆ ಮನುಷ್ಯರೇ ಮನುಷ್ಯರನ್ನು ಕೀಳಾಗಿ ನೋಡಲು ಪ್ರಾರಂಭ ಮಾಡಿದ್ದರಿಂದ ಅದನ್ನು ನಿವಾರಿಸಲು ಹುಟ್ಟಿದ ದಾರ್ಶನಿಕರಲ್ಲಿ ಸಂತ ಕನಕದಾಸರು ಒಬ್ಬರು. ಕೆಳವರ್ಗದಲ್ಲಿ ಜನಿಸಿದ್ದ ಕನಕದಾಸರು ಮಧ್ಯಕಾಲೀನ ಸಮಾಜ ಜೀವನ ಜಾತಿ ಧರ್ಮಗಳ ಕಚ್ಚಾಟದಲ್ಲಿ ತೊಡಗಿದ್ದಾಗ ತಮ್ಮ ಕೃತಿಗಳ ಮೂಲಕ ಅದಕ್ಕೆ ಔಷಧಿ ನೀಡಿ ಸಮಸ್ಯೆ ಗುಣಪಡಿಸುವ ಕಾರ್ಯಕ್ಕೆ ತೊಡಗಿದ್ದು ವಿಶೇಷ.

ಮೇಲ್ವರ್ಗದವರ ಅಹಂಕಾರವನ್ನು ಮುರಿಯಲು ಕೆಳವರ್ಗದವರ ಅತ್ಮ ಗೌರವವನ್ನು ಕಾಪಾಡಲು ವೈಷ್ಣವರ ಜಾತಿವರ್ಗವಾದವನ್ನು ನೇರವಾಗಿ ಪ್ರತಿಭಟಿಸಲಾರದ ಅಸಹಾಯಕತೆಯಲ್ಲಿ ಸಿಲುಕಿದ್ದರೂ ಧಾನ್ಯರೂಪಕದ ಮೂಲಕ ಪ್ರತಿಭಟಿಸಿದ ಕನಕದಾಸರು ತಮ್ಮ ಕೃತಿಗಳಲ್ಲಿ, ಕೀರ್ತನೆಗಳಲ್ಲಿ, ತಮ್ಮ ಜಾತಿ ಮತ್ತು ಧರ್ಮಾತೀತ ನೆಲೆಯನ್ನು ಸ್ಪಷ್ಟಪಡಿಸಿದ್ದಾರೆ. ಕುರುಬ ಜನಾಂಗಕ್ಕೆ ಸೇರಿದ ಕನಕದಾಸರನ್ನು ವ್ಯಾಸರಾಯರು ಶಿಷ್ಯರಾಗಿ ಮಾಡಿಕೊಂಡ ಮೇಲೆ ಕನಕದಾಸರು ವ್ಯಾಸರಾಯರ ಮೇಲ್ವರ್ಗದ ಶಿಷ್ಯರಿಂದ ಸಾಕಷ್ಟು ಅವಮಾನ, ಪಿತೂರಿ, ಕಿರುಕುಳವನ್ನು ಅನುಭವಿಸುತ್ತಾರೆ. ಅದನ್ನು ಅವರ ಕತೆಗಳು ಮತ್ತು ಕೆಲವು ಕೀರ್ತನೆಗಳೇ ಸಾಕ್ಷಿಯಾಗಿ ಈಗಲೂ ನಮ್ಮ ನಡುವೆ ಪ್ರಚಲಿತದಲ್ಲಿವೆ.

ಒಬ್ಬ ವ್ಯಕ್ತಿಗೆ ಗೌರವ ಅವನ ಹುಟ್ಟಿನಿಂದ, ಜಾತಿಯಿಂದ ಸಿಗುವುದಿಲ್ಲ. ಬದಲಾಗಿ ಅವನ ವ್ಯಕ್ತಿತ್ವದಿಂದ, ಅವನ ನಡೆನುಡಿಯಿಂದ ಅವನ ಮಾನವೀಯ ಗುಣಗಳಿಂದ, ಸಾಧನೆಗಳಿಂದ, ಅವನಿಗೆ ಗೌರವ ವಿಶೇಷ ಸ್ಥಾನಮಾನ ಸಿಗುತ್ತದೆ. ಆವಾಗಲೇ ಅದಕ್ಕೆ ಬೆಲೆ. ಆದರೆ ಇದರ ಅರಿವಿರದ ಮೇಲ್ವರ್ಗದ ಅಹಂಕಾರಿ ಜನರು ಕನಕರ ಜಾತಿ ಬಗ್ಗೆ ಹೀಯಾಳಿಸಿದ್ದರಿಂದ ಅವರನ್ನು ಕೀಳಾಗಿ ನೋಡುತ್ತಿದ್ದರಿಂದ ಮನನೊಂದ ಕನಕದಾಸರು

**“ ಯಾತರವನೆಂದುಸುರಲಿ ಜಗನ್ನಾಥ**
**ಮಾಡಿದ ಒಂದು ನರರೂಪವಯ್ಯ”**

ಎಂದು ಮಾರ್ಮಿಕವಾಗಿ ಕೀರ್ತನೆಯನ್ನು ರಚಿಸಿ ಉತ್ತರ ನೀಡಿದ್ದಾರೆ. ಎಲ್ಲರನ್ನು ಹುಟ್ಟಿಸಿದ ದೇವರು ನನ್ನನ್ನು ಜನ್ಮ ನೀಡಿದ್ದಾನೆ ಎಲ್ಲರೂ ಮಾನವರೇ ನಾನು ಕೂಡ ನರರೂಪದ ಒಬ್ಬ ಮನುಷ್ಯನೇ ಇದರಲ್ಲಿ ಜಾತಿ ಧರ್ಮದ ಮಾತೆಲ್ಲಿ ಬಂತು ಮನುಷ್ಯ ಜಾತಿವೊಂದೇ ಅಂತಿಮ ಎಂದು ಕೀರ್ತನೆ ಮೂಲಕ ಚಾಟಿ ಬೀಸಿದ್ದಾರೆ.

ಕುಲ ಕುಲವೆಂದು ದೈವಧರ್ಮಗ"ಳ ಹೆಸರಿನಲ್ಲಿ ಜನರನ್ನು ಕೀಳಾಗಿ ನೋಡುತ್ತ, ಶೋಷಣೆ ಮಾಡುತ್ತ, ತಮ್ಮ ಸ್ವಾರ್ಥ ಸಾಧನೆಗೆ ಬಳಸಿಕೊಳ್ಳುತ್ತಿದ್ದ ಪುರೋಹಿತವರ್ಗವನ್ನು ಕಂಡು ಅಸಹ್ಯಪಟ್ಟಿದ್ದ ಕನಕದಾಸರು ಜಾತಿಯನ್ನು ವಿರೋಧಿಸಲು ಬರೆದ ಕೀರ್ತನೆಯನ್ನು ಈ ಕೆಳಗಿನಂತೆ ಉಲ್ಲೇಖಿಸಬಹುದು.

" ಕುಲ ಕುಲ ಕುಲವೆನ್ನುತಿಹರು
ಕುಲವ್ಯಾವುದು ಸತ್ಯ ಸುಖವುಳ್ಳ ಜನರಿಗೆ
ಕೆಸರೊಳು ತಾವರೆ ಪುಟ್ಟಲು ಅದು ತಂದು
ಬಸಜನಾಭನಿಗರ್ಪಿಸಲಿಲ್ಲವೆ
ಹಸುವಿನ ಮಾಂಸ ದೊಳುತ್ಪತ್ತಿ ಕ್ಷೀರವ
ವಸುಧೆಯೊಳಗೆ ಭೂಸುರರುಣಲಿಲ್ಲವೆ
ಮೃಗಗಳ ಮೈಯಲಿ ಪುಟ್ಟಿದ ಕತ್ತುರಿಯ
ತೆಗೆದು ಪೂಸುವರು ದ್ವಿಜರೆಲ್ಲರು
ಬಗೆಯಿಂದ ನಾರಾಯಣ ನ್ಯಾವಕುಲ
ಆಗಜ ವಲ್ಲಭನ್ಯಾತರ ಕುಲದವರು
ಆತ್ಮಯಾವಕುಲ ಜೀವಯಾವ ಕುಲ
ತತ್ವೇಂದ್ರಿಯಗಳ ಕುಲ ಪೇಳರಯ್ಯ
ಆತ್ಮಾಂತರಾತ್ಮ ನೆಲೆಯಾದಿ ಕೇಶವನು
ಆತನೊಲಿದ ಮೇಲೆ ಯಾತರ ಕುಲವಯ್ಯ"

ಈ ಕೀರ್ತನೆಯ ಮೂಲಕ ಕನಕದಾಸರು ಕೆಳಜಾತಿಯ ಮನುಷ್ಯರು ಮುಟ್ಟಿಸಿಕೊಳ್ಳಲು ಅನರ್ಹರು ಎಂದ ಮೇಲೆ ವಿಷ್ಣು, ಶಿವ ಇವರ ಕುಲ ಯಾವುದು ಎಂದು ಪ್ರಶ್ನಿಸುವುದರ ಮೂಲಕ ಪುರೋಹಿತಶಾಹಿಯ ಹುನ್ನಾರಗಳನ್ನು ಬಯಲಿಗೆಳೆದಿದ್ದಾರೆ. ಕೆಸರಲಿ ಹುಟ್ಟಿದ ಕಮಲವನ್ನು ಪೂಜೆಗೆ, ಮೃಗದ ಮೈಯಲಿ ಹುಟ್ಟಿದ ಕಸ್ತೂರಿಯನ್ನು ಮೈಗೆ ಲೇಪಿಸಿಕೊಳ್ಳಲು, ಮಾಂಸದಲ್ಲಿ ಹುಟ್ಟುವ ಹಾಲನ್ನು ಕುಡಿಯಲು ಬಳಸಬಹುದಾದರೆ ಎಲ್ಲರಂತೆ ರಕ್ತ, ಮಾಂಸ, ಚರ್ಮ, ಮನಸ್ಸು, ಕೈ–ಕಾಲು ಹೊಂದಿರುವ ಮನುಷ್ಯನನ್ನು ಜಾತಿ ಧರ್ಮದ ಆಧಾರದಲ್ಲಿ ಏಕೆ ಬೇರ್ಪಡಿಸುತ್ತೀರಿ ಎಂದು ಮಾರ್ಮಿಕವಾಗಿಯೇ ಚಾಟಿ ಬೀಸಿದ್ದಾರೆ.

ತುಂಬ ಜನಪ್ರಿಯವಾಗಿರುವ ಹೆಚ್ಚು ಜನರು ಬಳಸುವ ಉದ್ಧರಿಸುವ ಕನಕರ ಕೀರ್ತನೆ ಜಾತಿ ಕುಲದ ಪ್ರತಿರೋಧವನ್ನು ಸ್ಪಷ್ಟವಾಗಿ ಅಭಿವ್ಯಕ್ತಿಸಿರುವುದನ್ನು ನೋಡಬಹುದು.

" ಕುಲ ಕುಲವೆಂದು ಹೊಡೆದಾಡದಿರಿ ನಿಮ್ಮ
ಕುಲದ ನೆಲೆಯೇನಾದರೂ ಬಲ್ಲಿರ ॥
ಹುಟ್ಟಿದ ಯೋನಿಗಳಲ್ಲ ಮೆಟ್ಟದ ಭೂಮಿಗಳಲ್ಲ
ಅಟ್ಟು ಉಣ್ಣದ ವಸ್ತುಗಳಲ್ಲ
ಗುಟ್ಟು ಕಾಣಿಸಬಂತು ಹಿರಿದೇನು ಕಿರಿದೇನು
ನೆಟ್ಟನೆ ಸರ್ವಜ್ಞನ ನೆನೆ ಕಂಡ್ಯ ಮನುಜ ॥

ಈ ಮೇಲಿನ ಕೀರ್ತನೆ ಮುಖಾಂತರ ಕನಕರು ಪುರಾಣ, ಸ್ಮೃತಿ, ಶಾಸ್ತ್ರಗಳನ್ನು ಓದಿಕೊಂಡ ಪುರೋಹಿತಶಾಹಿಯನ್ನು ಅವರ ಕುಲದ ಮೂಲವನ್ನು ಪ್ರಶ್ನಿಸುತ್ತಾರೆ. ಸಕಲ ಜೀವರಾಶಿಗಳಿಗೆ ತಾಯಿಯಾಗಿರುವ ಜಲದ ಮೂಲವನ್ನು ಕಂಡುಹಿಡಿಯಲು ಸಾಧ್ಯವಿಲ್ಲವೆಂದ ಮೇಲೆ ಪ್ರಕೃತಿಯಿಂದ ಸೃಷ್ಟಿಯಾಗಿರುವ ಮನುಜನು ತಾನೇ ತನ್ನ ಸ್ವಾರ್ಥಕ್ಕಾಗಿ ನಿರ್ಮಿಸಿಕೊಂಡಿರುವ ಜಾತಿಯ ಧರ್ಮದ, ವರ್ಣಕುಲದ ನೆಲೆಯನ್ನು ಹೇಗೆ ಹುಡುಕಲು ಸಾಧ್ಯ. ಹಾಗಾಗಿ ಜಾತಿ, ಕುಲ ಧರ್ಮವೆಂದು ಕಚ್ಚಾಡಿಕೊಂಡು ಅಂತರ ಕಾಪಾಡಿಕೊಂಡು ಬದುಕುವುದರಲ್ಲಿ ಅರ್ಥವಿಲ್ಲ ಎಂದು ಕನಕದಾಸರು ಈ ಕೀರ್ತನೆ ಮೂಲಕ ಸ್ಪಷ್ಟಪಡಿಸಿದ್ದಾರೆ.

ಭಾರತೀಯ ಅನುಭಾವಿ ಪರಂಪರೆಯ ಭಕ್ತ ಸಂತರ ಅಭಿವ್ಯಕ್ತಿ ವಿಧಾನ ಭಿನ್ನವಾಗಿತ್ತು ಎಂಬುದಕ್ಕೆ ಸಾಕ್ಷಿಯಾಗಿ ಈ ಕೆಳಗಿನ ಕೀರ್ತನೆಯನ್ನು ಗಮನಿಸಬಹುದು.

" ಎಂಜಲೆಂಜಲು ಎಂಬುದು ನುಡಿ
ಎಂಜಲಲ್ಲವೆ ಬಾರಿ ಜಲಚರ
ದೆಂಜಲಲ್ಲವೆ ಹಾಲುಕರುವಿನ ಎಂಜಲೆನಿಸರದೆ
ಎಂಜಲಲ್ಲಿಯದೆಲ್ಲಿಯಂ ಪರ
ಕಿಂಜಲಲ್ಲದೆ ಬೇರೆ ಭಾವಿಸ
ಲೆಂಜಲುಂಟೆ ದೇವ ರಕ್ಷಿಸು ನಮ್ಮನನವರತ"

ಈ ಮೇಲಿನ ಪದ್ಯವನ್ನು ಗಮನಿಸಿದಾಗ ಕನಕದಾಸರು ಮೇಲ್ವರ್ಗದ ಜನ ಎಂದು ಅಹಂ ಪಡುವ ಅವಿವೇಕಿ ಜನಗಳ ಅಜ್ಞಾನವನ್ನು, ಸಮಯ ಸಾಧಕತನವನ್ನು ಬಯಲಿಗೆಳೆಯುತ್ತಾರೆ. ಕೆಳವರ್ಗದ ಜನರು, ಶೂದ್ರರು, ಅಸ್ಪಶ್ಯರು ಎಂದು ಗೇಲಿ ಮಾಡುತ್ತಾ ಜನರನ್ನು ಮುಟ್ಟದ, ಹತ್ತಿರ ಸೇರಿಸಿಕೊಳ್ಳದ, ಊಟ ನೀರು ಕೊಡದೆ, ಒಂದು ವರ್ಗದ ಜನರು ಅದೇ ಶೂದ್ರರ ಮನೆಯಲ್ಲಿನ ಹಾಲನ್ನು ಮಾತ್ರ ಯಾವುದೇ ಹಿಂಜರಿಕೆಯಿಲ್ಲದೆ ಬಳಸುವುದು, ಕುಡಿಯುವುದು ನೋಡಿದರೆ ಅವರ ಸ್ವಾರ್ಥ ಯಾವ ಪ್ರಮಾಣದ್ದು

ಎಂಬುದನ್ನು ಕನಕರು ಈ ಮೇಲಿನ ಪದ್ಯದ ಮೂಲಕ ಸ್ಪಷ್ಟಪಡಿಸುತ್ತಾರೆ. ಪ್ರಕೃತಿಯಲ್ಲಿರುವ ಪ್ರಾಣಿಪಕ್ಷಿಗಳು, ಗಿಡಮರಬಳ್ಳಿಗಳು ನೀರು ಎಲ್ಲವೂ ಪರಸ್ಪರ ಆಶ್ರಯಿಸಿಕೊಂಡು ಬದುಕುತ್ತಿವೆ. ಬದುಕು ಜೈವಿಕ ಜಾಲ ವಾಗಿರುವುದರಿಂದ ಎಲ್ಲವೂ ಒಂದು ರೀತಿಯಲ್ಲಿ ಎಂಜಲೇ ಆಗಿದೆ. ಹಾಲು, ನೀರು, ಹಣ್ಣು, ಸೊಪ್ಪು, ಸದೆ ಎಲ್ಲವನ್ನು ಪ್ರಾಣಿ ಪಕ್ಷಿಗಳು ಸ್ಪರ್ಷಿಸಿರುವುದರಿಂದ ಎಲ್ಲವೂ ಎಂಜಲುಗಳೇ ಆಗಿವೆ. ಅಂಥದ್ದರಲ್ಲಿ ಕೆಳಜಾತಿಯ ಜನರನ್ನು ಎಂಜಲು ಎಂದು ದೂರುತ್ತ ಅವರನ್ನು ಅಮಾನವೀಯವಾಗಿ ನಡೆಸಿಕೊಳ್ಳುವುದು ಎಷ್ಟರ ಮಟ್ಟಿಗೆ ಸರಿ ಎಂದು ಪ್ರಶ್ನೆ ಮಾಡುತ್ತಾ ಕನಕರು ತಮ್ಮ ಜಾತಿ ಮತ್ತು ಧರ್ಮಾತೀತ ನಿಲುವನ್ನು ಸ್ಪಷ್ಟಪಡಿಸಿದ್ದಾರೆ.

"ತೊಲಗುವರು ಕಡೆಕಡೆಗೆ ತಾ ಹೊಲೆ
ಹೊಲೆಯನುತ ಕಳವಳಸಿ ಮೂತ್ರದ
ಬಿಲದೊಳಗೆ ಬಂದಿಹುದು ಕಾಂದೆ ಬದಿದೆ ಮನನೊಂದು
ಜಲದೊಳಗೆ ಮುಳುಗಿದರೆ ತೊಲಗದು
ಹೊಲಗೆಲಸವೀ ದೇಹದೋಳು ನೀ
ನೆಲೆಸಿರಲು ಹೊಲೆಯುಂತೆ ರಕ್ಷಿಸು ನಮ್ಮವನವರತ"

ಈ ಮೇಲಿನ ಪದ್ಯದಲ್ಲಿ ಕನಕಕರು ಮಡಿಮಡಿ ಎಂದು ಬದುಕುವ ಜನರಿಗೆ ಸರಿಯಾಗಿಯೇ ಮರ್ಮಾಘಾತ ನೀಡಿದ್ದಾರೆ. ಎಲ್ಲ ದೇಹಗಳು ಒಂದೇ ಯಾವ ದೇಹವು ಮೇಲಲ್ಲ, ಕೀಳಲ್ಲ ಅಂಥದ್ದರಲ್ಲಿ ಹೊಲೆಹೊಲೆಯರು ಎಂದು ಜನರನ್ನು ಹೀಯಾಳಸುತ್ತ ಅಹಂಕಾರದಿಂದ ತಪ್ಪನ್ನು ಎಸಗುವ , ದೌರ್ಜನ್ಯ ಮಾಡುವ ಪ್ರಭಾವಿವರ್ಗದವರು ತಾವು ಮಾಡಿದ ಪಾಪಗಳನ್ನು ತೊಳೆದುಕೊಳ್ಳಲು ಮೂಗನ್ನು ಹಿಡಿದು ನೀರಲ್ಲಿ ಮುಳುಗಿದರೆ ಪಾಪಗಳು ವಾಸಿಯಾಗುವುದಿಲ್ಲ. ಮೊದಲು ನಿಮ್ಮ ಮನಸ್ಸನ್ನು ಪರಿಶುದ್ಧವಾಗಿಟ್ಟುಕೊಳ್ಳಿ ಎಂದು ಕನಕದಾಸರು ತಾವು ಸುಜಾತರು ಎಂದು ಕರೆದುಕೊಳ್ಳುವ ಜನರಿಗೆ ಬುದ್ಧಿಮಾತು ಹೇಳದ್ದಾರೆ.

"ತೀರ್ಥವನು ಪಿಡಿದವರೆಲ್ಲ ತಿರುನಾಮದಾರಿಗಳೆ
ಜನ್ಮ ಸಾರ್ಥಕವಿಲ್ಲದವರೆಲ್ಲ ಭಾಗವತರೆ"

ಎಂದು ಪ್ರಾರಂಭವಾಗುವ ಕೀರ್ತನೆಯಲ್ಲಿ ಕನಕದಾಸರು ತಾವು ಮಹಾ ಸತ್ಯಸಂಧರು, ಮಹಾಭಕ್ತರು, ಶ್ರೇಷ್ಠರು, ಸುಜಾತರು ಎಂದು ಹೇಳುತ್ತ ಭ್ರಮೆಯಲ್ಲಿ ಮುಳುಗಿದ ಜನರ ಜನ್ಮವನ್ನು ಜಾಲಾಡಿದ್ದಾರೆ. "ನೀತಿ ತತ್ವದವರೆಲ್ಲ ದೇವಬ್ರಾಹ್ಮಣರೇ? ಹೊಟ್ಟೆಗುಡ ಮೃಗಗಳೆಲ್ಲ ಶ್ರೀವೈಷ್ಣವರೇ? 'ಭಂಗಿ ಮುಕ್ಕಗಳೆಲ್ಲ ಲಿಂಗವಂತರೆ? ಎಂಬ ಪ್ರಶ್ನೆಗಳ ಮುಖಾಂತರ ಅವರನ್ನು ಬೆತ್ತಲು ಮಾಡಿದ್ದಾರೆ. ಮನುಷ್ಯನಿಗೆ

ಬೆಲೆ ಸಿಗುವುದು ಶುದ್ಧ ನಡೆನುಡಿ, ವ್ಯಕ್ತಿತ್ವದಿಂದ ವಿನಃ ತಮ್ಮ ಜಾತಿ, ಧರ್ಮದ ಲಾಂಛನಗಳಿಂದ ಅಲ್ಲ ಎಂಬುದನ್ನು ಕನಕರು ಈ ಕೀರ್ತನೆ ಮುಖಾಂತರ ರುಜುವಾತು ಮಾಡಿದ್ದಾರೆ.

ವೇದ ಕಲಿಸುವ, ಪೂಜೆ ಮಾಡುವ, ಪಾಠ ಮಾಡುವ ವೃತ್ತಿಯಂತೆ ಚಪ್ಪಲಿ ಹೊಲಿಯುವ, ಬಟ್ಟೆ ತೊಳೆಯುವ, ಮಾಂಸ ಮಾರುವ ವೃತ್ತಿಗಳು ಕೂಡ ಶ್ರೇಷ್ಠವಾದದ್ದೆ. ವೃತ್ತಿಗಳಲ್ಲಿ ಮೇಲು ಕೀಳು ಎಂಬುದು ಇಲ್ಲ ಎಲ್ಲ ವೃತ್ತಿಗಳನ್ನು ಮಾಡುವ ಜನರ ಉದ್ದೇಶ ಹೊಟ್ಟೆಗೆ ಅನ್ನ ಗಳಿಸಲು ದೇಹಕ್ಕೆ ಹಾಕಿಕೊಳ್ಳಲು ಬಟ್ಟೆ ಪಡೆಯಲು ಅಷ್ಟೆ ಎಂಬುದನ್ನು ಕನಕದಾಸರು

‘ ಎಲ್ಲಾರೂ ಮಾಡುವುದು ಹೊಟ್ಟೆಗಾಗಿ ,
ಗೇಣು ಬಟ್ಟೆಗಾಗಿ ತುತ್ತು ಹಿಟ್ಟಿಗಾಗಿ
ಉನ್ನತ ನೆಲೆಯಾದಿಕೇಶವನ ಧ್ಯಾನವನ್ನು
ಮನಮುಟ್ಟಿ ಮಾಡುವಂತೆ ಮುಕ್ತಿಗಾಗಿ, ಆನಂದಕ್ಕಾಗಿ
ಎಂಬ ಕೀರ್ತನೆಯಲ್ಲಿ ತುಂಬ ಚೆನ್ನಾಗಿ ಸಾದರಪಡಿಸಿದ್ದಾರೆ.

"ವರ್ಗ ಸಂಘರ್ಷದ ಹಿನ್ನಲೆಯ ಕಾವ್ಯವಾಗಿ ರಾಮಧಾನ್ಯ ಚರಿತೆ"

ಹದಿನಾರನೇಯ ಶತಮಾನದಲ್ಲಿಯ ಸಾಮಾಜಿಕ ಪದ್ಧತಿಗಳಿಗೆ ಕನ್ನಡಿ ಹಿಡಿದಿರುವ ಕೃತಿಯೇ ಕನಕದಾಸರ ರಾಮಧ್ಯಾನ ಚರಿತೆ. ಆ ಕಾಲದಲ್ಲಿದ್ದ ಕನಕದಾಸರು ಮೇಲ್ವರ್ಗದ ಜನರಿಂದ ಅನುಭವಿಸಿದ್ದ ತಿರಸ್ಕಾರ ಅವಹೇಳನಗಳನ್ನು ಮತ್ತು ಜಾತಿಯಂಬ ಪೆಡಂಭೂತ ತನ್ನ ಜೀವನದುದ್ದಕ್ಕೂ ಯಾವ ರೀತಿಕಾಡಿತು ಎಂಬುದನ್ನೆ ಕೃತಿಯ ವಸ್ತುವನ್ನಾಗಿ ಇಟ್ಟುಕೊಂಡು "ರಾಮಧಾನ್ಯ ಚರಿತೆ"ಯನ್ನು ರಚಿಸಿದ್ದಾರೆ.

ಕನಕದಾಸರ ಕಾಲದಲ್ಲಿ ರಾಗಿಯು ಬಡವರ ಸಾಮಾನ್ಯ ಜನರ ಆಹಾರವಾಗಿತ್ತು. ಭತ್ತವು ಶ್ರೀಮಂತರ, ಪ್ರತಿಷ್ಠಿತರ, ಉತ್ತಮ ವರ್ಗದ ಜನರ ನಿತ್ಯುಪಯೋಗ ಮಾಡುವ ಆಹಾರ ಧಾನ್ಯವಾಗಿತ್ತು. ರಾಗಿಯು ಶ್ರೀಮಂತರಿಗೆ ಅಸಹ್ಯವಾದ ವಸ್ತುವಾಗಿದ್ದರೆ ಭತ್ತವು ಬಡವರ ಪಾಲಿಗೆ ನಿಲುಕದ ಗಗನ ಕುಸುಮವಾಗಿತ್ತು. ಹಾಗಾಗಿ ತಾನು ಹೇಳಬೇಕು ಎಂಬ ಹಂಬಲದಿಂದ ಕನಕದಾಸರು ತಮ್ಮ ಕೃತಿಗೆ ರಾಗಿ ಮತ್ತು ಭತ್ತಗಳನ್ನೆ ಪಾತ್ರಗಳನ್ನಾಗಿ ಆರಿಸಿಕೊಂಡಿದ್ದಾರೆ. ಇವತ್ತಿನವರೆಗೂ ರಾಗಿ ಮತ್ತು ಭತ್ತಗಳ ರೂಪಕಗಳ ಮೂಲಕ ಸರಳವಾಗಿ, ಸುಲಭವಾಗಿ ಅರ್ಥವಾಗುವ ರೀತಿಯಲ್ಲಿ ಜಾತಿಯೆಂಬ ಭೂತದ ಸಮಸ್ಯೆಗಳನ್ನು, ಅದರಿಂದ ಸಾಮಾನ್ಯರು ಅನುಭವಿಸುವ ವೇದನೆಯನ್ನು ಜನರ ಮುಂದೆ ತೆರೆದಿಟ್ಟು ಮೇಲಜಾತಿಯವರ ಗರ್ವಕ್ಕೆ ಪೆಟ್ಟು ನೀಡುವ ಕೆಲಸವನ್ನು ಕನಕದಾಸರು 'ರಾಮಧಾನ್ಯ ಚರಿತ್ರೆ' ಕಾವ್ಯದ ಮೂಲಕ ಮಾಡಿದ್ದಾರೆ.

ಕನಕದಾಸರು ತಾವು ಸಾಧನೆ ಮಾಡಲು ಹೊರಟಾಗ ಅನುಭವಿಸಿದ ಸಾಮಾಜಿಕ ತೊಡರುಗಳನ್ನು ಈ ಕಾವ್ಯದ ಮೂಲಕ ತೆರೆದಿಟ್ಟದ್ದಾರೆ "ತಾನು ಹೋದಲೆಲ್ಲಾ ಶೂದ್ರ ಅನ್ನಿಸಿಕೊಂಡಿದ್ದರ ಪ್ರತಿಧ್ವನಿಯೇ ರಾಮಧಾನ್ಯ ಕತೆಯಲ್ಲಿ ಮಿಡಿದಿದೆ ಎಂಬುದರಲ್ಲಿ ಸಂಶಯವಿಲ್ಲಾ, ವ್ಯಾಸರಾಯ ಗೌತಮನಾಗಿ ನರೆದಲಗ ಕನಕನಾಗಿ ಮಠಿಕರು ವ್ರೀಹಿಯಾಗಿ ಈ ಕಾವ್ಯದಲ್ಲಿ ಪ್ರತಿಕ್ರಿಯಿಸಿದ್ದಾರೆ.

ಈ ಕ್ರಿಯೆ ಮತ್ತು ಪ್ರತಿಕ್ರಿಯೆಗಳನ್ನು ರಾಮಾಯಣದ ಕತೆಯೊಳಗೆ ತಂದಿರುವುದರ ಜಾತಿತ್ವದ ಬಗ್ಗೆ ಕೆಲವರಿಗಾದರೂ ಸಂಶಯ ಉಂಟಾಗಬಹುದು.

ರಾಮಾಯಣದ ಲೋಪಗಳಿಗೂ ಕವಿ ಇಲ್ಲಿ ಉತ್ತರ ಕೊಡುತ್ತಿದ್ದಾನೆ ಅನ್ನಿಸದಿರದು ಉದಾಹರಣೆಗೆ ಶಂಭೂಕನು ತಪಸ್ವಿಗೆ ಅರ್ಹನಲ್ಲ ಎಂಬುದು ರಾಮಾಯಣದ ಬ್ರಾಹ್ಮಣರವಾದ ರಾಗಿ ಶೂದ್ರಾನ್ನವಾದುದರಿಂದ ಲೋಕದಲಧಿಕ ಭೋಜನವಲ್ಲವೆಂಬುದು ಅಕ್ಕಿಯವಾದ. ಕನಕದಾಸ ಕುರುಬನಾದುದರಿಂದ ಕಾವ್ಯದ ರಚನೆಗೆ ಅರ್ಹನಲ್ಲ ವ್ಯಾಸರಾಯನಿಂದ ತೀರ್ಥ ಪಡೆಯಲು ಅರ್ಹನಲ್ಲ ಎಂಬುದು ಮಠಿಕರವಾದ. ಈ ಮತೀಯ ಭಾವನೆಗಳಿಗೆ ಮಾರ್ದನಿಯೇ ರಾಮಧಾನ್ಯ ಚರಿತೆ.

ಕನಕದಾಸರು ಬರೆದಿರುವ ಈ ಪುಟ್ಟ ಕೃತಿಯು 158 ಭಾಮಿನಿ ಷಟ್ಪದಿಗಳಿಂದ ರಚಿತವಾದ ಕೃತಿ, ಆದರೆ ಪುಟ್ಟ ಕೃತಿಯಾದರೂ ಈ ಕಾವ್ಯದ ಒಳ ಹೊಕ್ಕು ನೋಡಿದಾಗ ಅದರಲ್ಲಿರುವ ಸಾಮಾಜಿಕ ಧ್ವನಿಯಿಂದಾಗಿ ಇದೊಂದು ಕನ್ನಡ ಸಾಹಿತ್ಯದಲ್ಲಿನ ವೈಶಿಷ್ಟ್ಯಪೂರ್ಣ ಕೃತಿಗಳಲ್ಲಿ ಒಂದು ಎಂಬುದು ಗೊತ್ತಾಗುತ್ತದೆ. ಸಂಶೋಧಕರಾದ ಡಾ॥ ಎಂ ಚಿದಾನಂದಮೂರ್ತಿಯವರು ರಾಮಧಾನ್ಯ ಚರಿತ್ರೆ ಕೃತಿಯ ಮಹತ್ವವನ್ನು ಈ ಕೆಳಗಿನಂತೆ ಮೂರು ಬಗೆಯಲ್ಲಿ ಗುರುತಿಸಿದ್ದಾರೆ.

1) ಕನಕ ದಾಸರ ಆತ್ಮ ಚರಿತ್ರಾತ್ಮಕ ಕೃತಿ

2) ಅಲಗರಿ (ಂಟಟಜಾಜಾಡಿಥಿ) ಕತೆಯಾಗಿದೆ

3) "ವರ್ಗಹೋರಾಟವನ್ನು (ಅಟಚಿ ,ಣಡಿಚಿಛಿಟಜ) ಚಿತ್ರಿಸುವ ಕೃತಿಯಾಗಿ"

ಕನಕದಾಸನು ಕೆಳಜಾತಿಯಲ್ಲಿ ಹುಟ್ಟಿದ ಕಾರಣಕ್ಕಾಗಿ ಅನುಭವಿಸಿದ ಅನ್ಯಾಯವನ್ನು ಶ್ರೂದ್ರಾನ್ನವಾದ ರಾಗಿಯೊಂದಿಗೆ ತನ್ನನ್ನು ಸಮೀಕರಿಸಿಕೊಂಡು ವ್ರೀಹಿಯನ್ನು ಪ್ರತಿಷ್ಠಿತ ವರ್ಗಕ್ಕೆ ಸಮೀಕರಿಸಿ ತನ್ನಂತೆ ಜಾತಿಪೀಡೆಗೆ ಬಲಿಯಾದವರ ಆತ್ಮಚರಿತ್ರಾತ್ಮಕ ಕೃತಿಯಾಗಿ ರಾಮಧಾನ್ಯ ಚರಿತೆಯನ್ನು ರೂಪಿಸಿದ್ದಾನೆ. ಅಲಗರಿ ಕತೆಗಳ ಮುಖ್ಯ ಉದ್ದೇಶವೇ ನೀತಿಕತೆಗಳನ್ನು ಹೇಳುವುದು. ಇಲ್ಲಿ ಮನುಷ್ಯನ ಆಹಾರ ಧಾನ್ಯಗಳಾದ ಬತ್ತ & ರಾಗಿಗಳು ಮನುಷ್ಯರಂತೆ ಮಾತಾಡುವುದನ್ನು ಚಿತ್ರಿಸಿ ಈ ಮೂಲಕ ದೇವರ ಕಣ್ಣಿನಲ್ಲಿ ಬಡವ ಶ್ರೀಮಂತ ಎಂದು ಬೇಧವಿಲ್ಲ ಎಂದು ಅಲಗರಿ ಕತೆಯಾಗಿ ರಾಮಧಾನ್ಯ ಚರಿತ್ರೆಯನ್ನು ನಿರೂಪಿಸಲಾಗಿದೆ. ವರ್ಗ ಹೋರಾಟವನ್ನು ತನ್ನದೇ ಆದ ಗಮನಾರ್ಹ ರೀತಿಯಲ್ಲಿ ಈ ಕೃತಿ

ಚಿತ್ರಿಸಿದೆ. ರಾಮಧಾನ್ಯ ಚರಿತೆ ಕೃತಿಯಲ್ಲಿನ "ಸಮಸ್ಯೆ ಕೆಳಜಾತಿ ಅಥವಾ ಶೂದ್ರ ಶೂದ್ರೇತರ ಜಾತಿಗಳ ಕಲಹಕ್ಕೆ ಸಂಬಂದಿಸಿದ್ದು ಮತ್ತು ಅದರ ಜೊತೆ ಜೊತೆಗೆ ಬಡವ ಶ್ರೀಮಂತರ ಹೋರಾಟಕ್ಕೂ ಕೆಳವರ್ಗದವರ ಎಚ್ಚರ ಮತ್ತು ಪ್ರತಿಭಟನೆಗೂ ಸಂಬಂಧಿಸಿದ್ದು ಆ ದೃಷ್ಟಿಯಿಂದ ರಾಮಧಾನ್ಯ ಚರಿತೆಯ ಕತೆ ಸೂಕ್ಷ್ಮ ವಿಶ್ಲೇಷಣೆಗೆ ಅರ್ಹವಾದುದು.

**ಶಿಶುನಾಳ ಶರೀಫರ ಸಾಹಿತ್ಯದಲ್ಲಿ ಜಾತಿ ಮತ್ತು ಧರ್ಮಾತೀತ ನೆಲೆಗಳು**

ಸಂತರ ಧ್ಯೇಯವೆನೆಂದರೆ ಸಮಾನತೆಯನ್ನು ಸರ್ವಧರ್ಮ ಸಮನ್ವಯವನ್ನು ಬೋಧಿಸುವುದು. ಸಂತರು ರಚಿಸಿದ ತತ್ವಪದಗಳು ಮತವನ್ನು ಮೀರಿ ಬದುಕಬೇಕು ಎಂದು ತಿಳಿಸುವ ಜನಸಾಮಾನ್ಯರ ಕಾವ್ಯಗಳಾಗಿವೆ. ಇಂತಹ ಸಂತರಲ್ಲಿ ಒಬ್ಬರಾದ ಶಿಶುನಾಳ ಶರೀಫರ ತತ್ವಪದಗಳು ಸಹ ಜನಸಾಮಾನ್ಯರ ಕಾವ್ಯಗಳು. ಅವರ ತತ್ವಪದಗಳು ಜನರಿಗೆ ಕೋಮುಸೌಹಾರ್ದತೆಯಿಂದ ಹೇಗೆ ಬದುಕಬೇಕೆಂದು ತಿಳಿಸಿಕೊಡುತ್ತವೆ. ಸಮರಸ ಜೀವನದ ದರ್ಶನವನ್ನು ತೋರಿಸಿಕೊಡುತ್ತವೆ.

ಜನರ ಮನಸ್ಸನ್ನು ಅಲೌಕಿಕ ಚಿಂತನೆಯ ನೆಲೆಯಲ್ಲಿ ನಿಲ್ಲಿಸುತ್ತವೆ. ಸಮಾಜದ ಜನರ ಮನಸ್ಸುಗಳು ಕೆಟ್ಟ ಕಾರ್ಯಗಳ ಕಡೆ ಹೋಗದಂತೆ ಸೃಷ್ಠಿಸುವಂತೆ ನೀತಿ ಬೋಧನೆಯನ್ನು ತಮ್ಮ ತತ್ವಪದಗಳ ಮೂಲಕ ನೀಡಿದರು. ಮನುಷ್ಯನ ಹೃದಯವು ಸನ್ಮಾರ್ಗದ ಕಡೆ ಚಿಂತನೆ ಹರಿಸುವಂತೆ ಸದಾಚಾರವನ್ನು ಆಲೋಚಿಸುವ ಕಡೆಗೆ ಮಾಡುವುದು. ಅವರ ಹೃದಯದಲ್ಲಿ ಕೋಮುದಂಗೆಯ ಬೀಜಗಳು ಬಿತ್ತದಂತೆ ಮಾಡಬೇಕಾದುದು ಶರೀಫರ ತತ್ವಪದಗಳ ಆಶಯವಾಗಿತ್ತು.

"ಶರೀಫರ ಜೀವನವು ಕೋಮು ಸೌಹಾರ್ದತೆಗೆ ಮಾದರಿಯಾಗಿ ಆದರ್ಶವಾಗಿ ಅನನ್ಯವಾಗಿದೆ. ಮುಸ್ಲಿಂ ಮನೆತನದಲ್ಲಿ ಹುಟ್ಟಿದ ಶರೀಫರು ಬೆಳೆಯುತ್ತ ಲಿಂಗಾಯತ ಧರ್ಮದ ಪ್ರಭಾವಕ್ಕೆ ಒಳಗಾಗಿದ್ದಾರೆ. ಅವರಿಗೆ ಧರ್ಮಧರ್ಮಗಳಲ್ಲಿ ಯಾವ ಸಾಂಕೇತಿಕ ವ್ಯತ್ಯಾಸಗಳು ಗೋಚರವಾಗದೇ ಅವೆಲ್ಲವೂ ಪರಿಪೂರ್ಣ ಮಾನವೀಯತೆಯ ಹಾದಿಯ ಸಾಧನೆಯ ಪರಿಕರಗಳಂತೆ ತೋರಿದವು. ಈ ಮನೋಭಾವನೆಯಿಂದ ಶರೀಫರಿಗೆ ಧರ್ಮಗಳ ಬಾಹ್ಯಾಚರಣೆಯು ಗೌಣವಾಗಿ ತತ್ತ್ವದಶ್ನವಾದುದರಿಂದಲೇ ಯಾವ ಧರ್ಮಕ್ಕೂ ಅಂಟಿಕೊಳ್ಳದೇ ಮಹಾಯಾನ ಮತಾಧರ್ಮಿಯಾದರು.

ಹಿಂದೂ–ಮುಸ್ಲಿಂರಲ್ಲಿ ಸಾಮರಸ್ಯವನ್ನು ತಮ್ಮ ಅನುಭಾವ ಪದಗಳಿಂದ ಮತ್ತು ತಮ್ಮ ರಚನೆಯ ಕಾಲಜ್ಞಾನ ಪದಗಳ ಮುಖಾಂತರ ಮಾಡಿದ್ದಾರೆ. ಶರೀಫರಿಗೆ ಅವರದೇ ಜಾತಿಯವರು ಮತ್ತು ಅನ್ಯಧರ್ಮಿಯರು ಸಾಕಷ್ಟು ಕಾಟ ಕೊಡುತ್ತಾರೆ, ಅವಮಾನ ಮಾಡುತ್ತಾರೆ. ಇದರಿಂದ ನೋವು

ಉಂಟಾದರೂ ಶರೀಫರು ತನ್ನ ಸುತ್ತಮುತ್ತಲಿನ ಪರಿಸರದಲ್ಲಿ ನಡೆಯುವ ಅನ್ಯಾಯ, ಮಡಿಮೈಲಿಗೆ, ಕಂದಾಚಾರ, ಅಸ್ಪಶ್ಯತೆ, ಅಶಾಂತಿಯನ್ನು ತಮ್ಮ ಪದಗಳ ಮುಖಾಂತರ ವಿಡಂಬನೆ ಮಾಡಿದ್ದಾರೆ. ಅವುಗಳನ್ನು ವಿರೋಧಿಸಿ ಪದಗಳನ್ನು ರಚಿಸಿ ತನ್ನ ಪದಗಳನ್ನು ಸೌಹಾರ್ದತೆಯಿಂದ ಬಾಳಲು ಪ್ರಚೋದಿಸಿದ್ದಾರೆ.

"ಲೋಕಿ ಒಳಗೆ ಮೂರು ಲೋಕ ಹುಟ್ಟಿತು
ಆ ಕುಲ ಈ ಕುಲ ಎಲ್ಲಿತ್ತು"

ಶರೀಫರ ಈ ಸಾಲುಗಳು ಜಾತಿ, ಜಾತಿ, ಕುಲ–ಕುಲ ಎಂದು ಬಡಿದಾಡುವ, ಆಚರಿಸುವ ಜನರಿಗೆ ಪ್ರಶ್ನೆಯನ್ನು ಕೇಳುತ್ತಿವೆ. ಜಾತಿ–ಕುಲಗಳು ಮೊದಲು ಎಲ್ಲಿ ಹುಟ್ಟಿದವು? ಹೇಗೆ ಹುಟ್ಟಿದವು? ಎಂದು ಪ್ರಶ್ನೆ ಕೇಳುತ್ತಿವೆ.

" ಆದಿ ಬ್ರಹ್ಮನಿಂದಲಿ ಮುನ್ನ
ಪ್ರಕೃತಿಯು ಉತ್ಪನ್ನ
ಅಹಂಕಾರದ ಜನನ
ಅಹಂಕಾರದಿ ಹುಟ್ಟಿತು ಗಗನ
ಗಗನದಿಂದ ಪವನ
ಪವನದಿಂದ ಅಗ್ನಿಯು ಆಯಿತೆನ್ನ
ಅಗ್ನಿಯಿಂದ ಜಲ ಕೇಳನ್ನ
ಪೃಥ್ವಿಯ ರಚನ
ಅದರೊಳು ಔಷಧಗಳಾದ ವಿನ್ನ
ಔಷಧದಿಂದ ಹುಟ್ಟಿತು ಅನ್ನ
ಅನ್ನದಿಂದ ವೀರ್ಯ ಉತ್ಪನ್ನ
ವೀರ್ಯದಿಂದ ಕ್ರಿಮಿ ಕೀಟಗಳ ಜನನ
ಈ ಪರಿಯಾಯಿತು ಚರಾಚರ
ಬದಿಯ ತೇಜದಿ ಅಂಕುಶ ನೇತ್ರ
ಜಲಕೆ ಚಿಹ್ನೆ ಪವಿತ್ರ
ಪೃಥ್ವಿಕೊಡಲು ಪ್ರಾಣ ವಿಚಿತ್ರ
ಗಗನ ಕೊಡಲಾಯಿತು ದೋತ್ರ

ಪಾವನಾಂಶವೇ ಗಾತ್ರ

ಎಂದು ಹೇಳಿದ ಶರೀಫರು ಈ ಸೃಷ್ಠಿಗೆ ಬ್ರಹ್ಮನೇ ಮೂಲ, ಜೀವಸೃಷ್ಠಿಗೆ ಪಂಚಭೂತಗಳಾದ ಗಗನ, ಪವನ, ಅಗ್ನಿ, ನೀರು, ಪೃಥ್ವಿಗಳು ಕಾರಣವಾಗಿದೆ ಎನ್ನುತ್ತಾರೆ. ಸೃಷ್ಠಿಯ ಮೇಲೆ ಜೀವಿಯು ಯಾವ ರೀತಿ ಜನಿಸಿದನು ಎಂದು ತಿಳಿಸಿದ್ದಾರೆ. ಇದರ ಮೂಲಕ ಜಾತಿ ಮತಗಳು ಹೇಗೆ ಸೃಷ್ಠಿಯಾದವು ಎಂದು ವೈಜ್ಞಾನಿಕವಾಗಿ ಪ್ರಶ್ನಿಸಿ ಜಾತಿಧರ್ಮಗಳು ಇವೆಲ್ಲವೂ ಸುಳ್ಳು ಎಲ್ಲ ಮನುಷ್ಯರು ಒಂದೇ ಎಂದು ಸಂದೇಶವನ್ನು ಹೇಳಿದ್ದಾರೆ.

" ಲಿಂಗದೊಳಗೆ ಮನವಿಡದಿನ್ನಷ್ಟಾವರಣದ
ಇಂಗಿತ ತಿಳಿದರೇನು ಫಲ?
ಜಂಗಮ ಜಂಗು ಕಟ್ಟು ಹಿಂಗದೆ ತಿರುಗಲು
ಸಂಗಮ ಶರಣರಿಗೇನು ಫಲ?

ಸ್ವಧರ್ಮದಲ್ಲಿಯ ಲೋಪದೋಷಗಳನ್ನು ಎತ್ತಿ ಹೇಳಿದ್ದಾರೆ. ಜೊತೆಗೆ ಜಾತಿಧರ್ಮಮತಗಳೆಲ್ಲವು ಸಮಾನತೆ, ಸಮನ್ವಯತೆಯನ್ನು ಸರಿಯಾಗಿ ಅರಿಯದೇ ನಾವೇ ಶ್ರೇಷ್ಠರು ಎಂದು ಮೆರೆಯುವ ಸ್ವಾರ್ಥಿಗಳು ಅಷ್ಟಾವರಣ ತತ್ವಗಳನ್ನು ಅರಿಯುವುದಿಲ್ಲ. ಈ ಪದದಲ್ಲಿ ಶರೀಫರ ಪರ'ಧರ್ಮ ಸಹಿಷ್ಣುತೆಯನ್ನು ಕಾಣಬಹುದು. ಇಸ್ಲಾಂ ಮತದ ಲೋಪ-ದೋಷಗಳನ್ನು ಖಂಡಿಸುತ್ತ ಲಿಂಗಾಯತ ಧರ್ಮದ ಅಲ್ಲಮಪ್ರಭುವನ್ನು ಇಸ್ಲಾಂ ಧರ್ಮದ ಅಲ್ಲಾನಿಗೆ ಹೋಲಿಸಿದ್ದಾರೆ.

ಅಲ್ಲಮಪ್ರಭುವನು ಅರಿಯದ ತುರುಕರು ಪಂಚತಾಬೂತ ಮಾಡುವುದು ವ್ಯರ್ಥ ಎಂದು ಹೇಳಿದ್ದಾರೆ. ಈ ಮೂಲಕ ತನಗೆ ಅಲ್ಲಾ-ಅಲ್ಲಮ ಬೇರೆಯಲ್ಲ, ಇಬ್ಬರು ಒಂದೇ ಎಂದು ಹೇಳಿದ್ದಾರೆ. ಅವರ ಪ್ರಕಾರ ಶುದ್ಧ ಮನಸಿನ ಸೇವೆಯೇ ಮುಖ್ಯ ಹೊರತು ಧರ್ಮದ ದೇವರಲ್ಲ. ಇದು ಶರೀಫರ ಪರಧರ್ಮ ಸಹಿಷ್ಣತೆ ಮತ್ತು ಕೋಮು ಸೌಹಾದರ್ತೆಯನ್ನು ತೋರಿಸುತ್ತದೆ.

ಶರೀಫರು ಎಲ್ಲ ಧರ್ಮಗಳ ಮೇಲೂ ಸಮಾನವಾದ, ಅಪಾರವಾದ ಗೌರವವನ್ನು ಹೊಂದಿದ್ದರು.

" ಗುಣವೇ ಇದು
ಗುಣವೇ
ಗುಣವಲ್ಲ ವಿಭೂತಿ
ಫಣಿಯೊಳೆಲ್ಲದ ಮೇಲೆ
ಸುರಮುನಿ ಹರಗಣ

ವರನಂದಿನಾಥರು

ಧರಿಸಿದಕ್ಷಣದೋಳು

ಮಗಣವಿಜಯರಾಗಿ

ಗುಣವೇ ಇದು ಗುಣವೇ

ವೀರಶೈವನು ಹಣೆಯ ಮೇಲೆ ವಿಭೂತಿಯನ್ನು ಹಚ್ಚದೇ ಇದ್ದುದ್ದನ್ನು ಕಂಡು ಶರೀಫರು ಹಾಡಿದ ಹಾಡಿದು. ಒಂದು ಧರ್ಮಕ್ಕೆ ಸೇರಿದ ವ್ಯಕ್ತಿಯು ತನ್ನ ಧರ್ಮದ ಪರಿಶುದ್ಧ ಆಚರಣೆಗಳನ್ನು ತಪ್ಪದೇ ಅನುಷ್ಠಾನಕ್ಕೆ ತರಬೇಕು ಎಂದು ಶರೀಫರು ಬಯಸುತ್ತಿದ್ದರು. ಅವರು ಎಲ್ಲ ಧರ್ಮದ ಲಾಂಛನಗಳಗೂ ಗೌರವ ನೀಡುತ್ತಿದ್ದರು. ಧರ್ಮಗಳ ಯಾವುದೇ ಆಚರಣೆಗಳನ್ನು ಅವರು ಹೀಯಾಳಸುತ್ತಿರಲಿಲ್ಲ.

"ಗಂಧ ವಿಭೂತಿ ತೊಗಲಿಗೆ ಧರಿಸಿ

ಜಾತಿ– ಬ್ಯಾಗೆಯಗಿಸಿ

ಸನ್ಯಾಸಯಾಗತೀರಿ

ಬೂದಿಯಲ್ಲ ಮೈಗೆ"

ಮಡಿಮೈಲಿಗೆಯಂದು ಹಾರಾಡುತ್ತಿದ್ದ ಅದರ ಅರ್ಥವೇ ತಿಳಯದಿದ್ದ ಮಡಿವಂತ ಜನರಿಗೋಸ್ಕರ ಹಾಡಿದ ತತ್ವಪದವಿದೆ ಇದರ ಮೂಲಕ ಅವರ ಆಚರಣೆಗಳನ್ನು ತಿದ್ದುವ ಪ್ರಯತ್ನ ಮಾಡಿದರು.

ಸಾಕಾರ ಸುಗುಣ ಉಪಾಸಕರಾಗಿ ಶರೀಫರು ಬಯಲು ಬಸವೇಶ್ವರ, ಯಲ್ಲಮ್ಮ ಮೊದಲಾದ ದೇವದೇವತೆಗಳನ್ನು ಕೊಂಡಾಡಿದ್ದಾರೆ.

" ಬಸವೇಶ್ವರ ಒಂದು ಪಾದವ ರುದ್ರಪಿಡಿದನು

ಬಸವೇಶನ ಒಂದು ಪಾದವ ವಿಷ್ಣು ಪಿಡಿದನು

ಬಸವೇಶನ ಒಂದು ಪಾದವ ಬ್ರಹ್ಮ ಪಿಡಿದನು

ಬಸವೇಶ್ವರನೇ ಸಕಲ ಜನವನು ನಾಲ್ಕು ಯುಗದಲಿ ಸಲಹುವನು."

ಎಂದು ನಂದಿಯ ಉಪಾಸಕರಾಗಿ ಶರೀಫರು ಕೊಂಡಾಡಿದ್ದಾರೆ.

**“ತೌಲನಿಕ ವಿಮರ್ಶೆ”**

ಕನಕ ಮತ್ತು ಶರೀಫ ಇಬ್ಬರೂ ಒಂದೇ ಜಿಲ್ಲೆಯ ಒಂದು ತಾಲೂಕಿನಲ್ಲಿ ಹುಟ್ಟಿ ಬದುಕಿ ಬಾಳಿದ್ದ ಮಹಾನ್ ಚೇತನಗಳು. ಇಬ್ಬರು ಬದುಕಿದ್ದ ಕಾಲಘಟ್ಟ ಮಾತ್ರ ಬೇರೆ ಬೇರೆ. ಹಾವೇರಿ ಜಿಲ್ಲೆಯ ಶಿಗ್ಗಾಂವ ತಾಲೂಕಿನ ಬಾಡ ಗ್ರಾಮದಲ್ಲಿ ಕನಕದಾಸರು ಜನಿಸಿದ್ದರೆ ಅದೇ ತಾಲೂಕಿನ ಶಿಶುವಿನಹಾಳದಲ್ಲಿ ಶರೀಫರು ಜನಿಸಿದ್ದು ಇಬ್ಬರೂ ಭೌಗೋಳಿಕವಾಗಿ ತುಂಬ ಹತ್ತಿರದವರು. ಕನಕರು ಜನಿಸಿದ್ದು ಕುರುಬ ಸಮುದಾಯದಲ್ಲಿ, ಶರೀಫರು ಅಲ್ಪಸಂಖ್ಯಾತ ಸಮುದಾಯದಲ್ಲಿ ಜನಸಿದ್ದು ಈ ಎರಡು ಸಮುದಾಯಗಳು ನಿರ್ಲಕ್ಷಿತ ಸಮುದಾಯಗಳೇ ಎಂದು ಹೇಳಬಹುದು. ಹಾಗಾಗಿ ಆಗಿನ ಕಾಲದ ಮೇಲ್ವರ್ಗದ ಜಾತಿಗಳೊಂದಿಗೆ ಸೆಣಸಾಡಿ, ಆಗಿನ ಕಾಲದ ಶಿಷ್ಟ ಸಾಹಿತ್ಯದ ದಟ್ಟ ಪ್ರಭಾವದಲ್ಲಿ ಮುಚ್ಚಿಕೊಂಡು ಮರೆಯಾಗಿದ್ದ ಸಾಂಸ್ಕೃತಿಕ ಪ್ರಭಾವವನ್ನು ಭೇದಿಸಿ ತಮ್ಮ ಸಾಹಿತ್ಯವನ್ನು ಸೃಷ್ಠಿಸಿ ಜನಸಾಮಾನ್ಯರ ಹೃದಯಕ್ಕೆ ಲಗ್ಗೆ ಹಾಕಿದ್ದು ಕನಕ ಶರೀಫರ ದೊಡ್ಡ ಸಾಧನೆ ಎಂದರೆ ತಪ್ಪಲ್ಲ.

ಇವರಿಗಿಂತ ಮೊದಲೇ ವಚನ ಪರಂಪರೆ–ಹರಿದಾಸ ಪರಂಪರೆ ಧರ್ಮ ಧರ್ಮಗಳ ನಡುವಿನ, ಜಾತಿ ಜಾತಿಗಳ ನಡುವೆ ಅಂತರದ ಗೋಡೆಯನ್ನು ಕೆಡವಿಹಾಕಲು ಸಾಕಷ್ಟು ಪ್ರಯತ್ನ ಪಟ್ಟು ಯಶಸ್ವಿಯಾಗಿತ್ತು. ನಂತರ ಹದಿನಾರನೇ ಶತಮಾನದಲ್ಲಿ ಬಂದ ಕನಕ'ದಾಸರು ಮತು ಹತ್ತೋಂಬತ್ತನೆಯ ಶತಮಾನದಲ್ಲಿ ಬಂದ ಶರೀಫರು ತಮ್ಮ ಕಾಲದ ಸಾಮಾಜಿಕ ಒತ್ತಡಗಳನ್ನು ನಿಭಾಯಿಸಿಕೊಂಡು ಆಳವಾಗಿ ಬೇರೂರಿದ್ದ ಜಾತಿಧರ್ಮದ ವಿಷಬೇರುಗಳನ್ನು ತಮ್ಮ ಸಾಹಿತ್ಯದ ಮೂಲಕ ಕಿತ್ತು ಹಾಕಲು ದೊಡ್ಡ ಕೊಡುಗೆಯನ್ನೆ ನೀಡಿದ್ದಾರೆ.

ಕನಕದಾಸರ ಕೀರ್ತನೆಗಳು ಮತ್ತು ಶರೀಫರ ತತ್ವಪದಗಳನ್ನು ಅಧ್ಯಯನ ಮಾಡಿದಾಗ ಇಬ್ಬರು ದಾರ್ಶನಿಕರ ಸಾಹಿತ್ಯದ ಪರಮಗುರು ಸಮಾಜದಲ್ಲಿ ಬೇರು ಬಿಟ್ಟಿರುವ ಜಾತಿರೋಗ, ಧರ್ಮರೋಗಕ್ಕೆ ಮದ್ದನ್ನು ಕಂಡು ಹಿಡಿಯುವುದೇ ಆಗಿದೆ ಎನ್ನಬಹುದು. ಪುರೋಹಿತಶಾಹಿಗಳ ದಬ್ಬಾಳಿಕೆಯಲ್ಲಿ ನಲುಗಿ ಹೊಗಿದ್ದ ಧರ್ಮವನ್ನು, ಸಂಸ್ಕೃತಿಯನ್ನು ಕಾಪಾಡಿ ಸಮಾಜದ ಅರೋಗ್ಯವನ್ನು ಸುಧಾರಿಸಲು, ತಮ್ಮ ಕಾಲದ ಸಮಾಜಕ್ಕೆ ಹೊಸ ಚಿಂತನೆಗಳ ಕೊಡುಗೆಯನ್ನು ನೀಡಲು ಕನಕ ಶರೀಫರು ತಮ್ಮ ಪದಗಳ ಮೂಲಕ ಯತ್ನಿಸಿದ್ದಾರೆ ಎನ್ನಬಹುದು. ಕನಕರ ಕೃತಿಗಳು ಮತ್ತು ಕೀರ್ತನೆಗಳು ಜನರಲ್ಲಿ ವೈಚಾರಿಕತೆ ಮತ್ತು ಮಾನವೀಯತೆಯನ್ನು ಬೆಳೆಸಿದ ಹಾಗೆ ಶರೀಫರ ಪದಗಳು ಸಹ ಜನರಲ್ಲಿ ಮನುಷ್ಯತ್ವವನ್ನು ಚಿಗುರಿಸಲು ಎಲ್ಲರೂ ಒಂದೇ ಎಂಬ ಏಕತಾಭಾವವನ್ನು ಬೆಳೆಸಲು ಯಶಸ್ವಿಯಾಗಿವೆ.

**ಪರಾಮರ್ಶನ ಗ್ರಂಥಗಳು**

1). ಪ್ರೊ.ಸುಧಾಕರ (ಸಂ) ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು– ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

2) ಡಾ॥ರಾಜಶೇಖರ ಮಠಪತಿ (ರಾಗಂ)(ಸಂ)–ಬಯಲು ಆಲಯದೊಳಗೊ ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಬೆಂಗಳೂರು.

3) ಕಾ.ತ.ಚಿಕ್ಕಣ್ಣ (ಸಂ)–ಕನಕ ಕಿರಣ – ಕಾಳಿದಾಸ ಸಾಂಸ್ಕೃತಿಕ ಸಂಘ ವಿಜಯನಗರ ಬೆಂಗಳೂರು

4) ಡಾ॥ಮಲ್ಲಿಕಾರ್ಜುನ ಸಿಂದ –ಶ್ರೀಶಿಶುನಾಳ ಶರೀಫರ ತತ್ವಪದಗಳು–ಶ್ರೀ ಸಿದ್ಧಾರೂಢ ಪ್ರಕಾಶನ , ಹುಬ್ಬಳ್ಳಿ

5) ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್– ಶಿಶುನಾಳ ಶರೀಫ ಸಾಹೇಬರ ಗೀತೆಗಳು –ಕ್ಷಮಾ ಪ್ರಕಾಶನ ಬೆಂಗಳೂರು